THE TIMES OF INDIA
KANNADA

Saturday, November 28th, 2009

**ಚಿನ್ನ ಗೆದ್ದ ಹರಿಕೃಷ್ಣ:** ಆರ್ ಹರಿಕೃಷ್ಣ ಜೈನ್ ಅಂತಾರಾಷ್ಟ್ರೀಯ ವಸತಿ ಶಾಲೆಯ (ಜೆಐಆರ್‌ಎಸ್) ವಾರ್ಷಿಕ ಕ್ರೀಡಾಕೂಟದಲ್ಲಿ ಶುಕ್ರವಾರ ಬಾಲಕರ 800 ಮೀ. ಓಟದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.
ಹರ್ಷ ದೀಪೇಶ್ ಶಾ ಮತ್ತು ರಚಿತ್ ಪೊದ್ದಾರ್ ಕ್ರಮವಾಗಿ 2 ಮತ್ತು 3ನೇ ಸ್ಥಾನ ಗಳಿಸಿದರು. ಬಾಲಕಿಯರ ಶಾಟ್‌ಪಟ್‌ನಲ್ಲಿ ವನ್ನೆಸ್ಸಾ ಎಲಿಜಾ ಫರ್ನಾಂಡಿಸ್ ಚಿನ್ನಕ್ಕೆ ಕೊರಳೊಡ್ಡಿದರೆ, ಇಶಾನಿ ಪಂಕಜ್ ಪಾಂಡ್ಯ ಮತ್ತು ಸುರಭಿ ಭಾಟಿಯಾ ಕ್ರಮವಾಗಿ ಬೆಳ್ಳಿ ಮತ್ತು ಕಂಚಿಗೆ ತೃಪ್ತಿಪಟ್ಟುಕೊಂಡರು.